All India Radio: Bangalore
National Bulletin In Kannada
27.05.2025 07.35 a.m.
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

27.05.2025 07.35 a.m.

ಮುಖ್ಯಾಂಶಗಳು

೧. ನವದೆಹಲಿಯಲ್ಲಿಂದು ೬೮ ಗಣ್ಯರಿಗೆ ಪದ್ಮ ಪ್ರಶಸ್ತಿ ಪ್ರದಾನ ಮಾಡಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು

೨. ಗುಜರಾತ್‌ನಲ್ಲಿಂದು ೫ ಸಾವಿರದ ೫೩೬ ಕೋಟಿ ರೂಪಾಯಿಗೂ ಅಧಿಕ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿರುವ ಪ್ರಧಾನಿ

೩. ಎಂಟು ರಾಜ್ಯಸಭಾ ಸ್ಥಾನಗಳಿಗಾಗಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ಭಾರತೀಯ ಚುನಾವಣಾ ಆಯೋಗ

೪. ನಾಟ್ವೆಲ್ ವರ್ಲ್ಡ್ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾಂಡ್ ಪ್ರಿಕ್ಸ್; ಪುರುಷರ ಜಾವೆಲಿನ್ ಸ್ಪರ್ಧೆಯಲ್ಲಿ ಭಾರತದ ಮಹೇಂದ್ರ ಗುರ್ಜರ್ ವಿಶ್ವ ದಾಖಲೆ

೫. ಐಪಿಎಲ್ ಟಿ-೨೦ ಕ್ರಿಕೆಟ್; ಮುಂಬೈ ಇಂಡಿಯನ್ಸ್ ವಿರುದ್ಧ ಪಂಜಾಬ್ ಕಿಂಗ್ಸ್ ಗೆ ೭ ವಿಕೆಟ್ ಜಯ

************

ರಾಷ್ಟ್ರಪತಿ ಭವನದಲ್ಲಿಂದು ಸಂಜೆ ನಡೆಯುವ ಎರಡನೇ ನಾಗರಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ವಿವಿಧ ಕ್ಷೇತ್ರಗಳ ಸಾಧಕರಿಗೆ ಪದ್ಮ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಒಂದಾದ ಪದ್ಮ ಪ್ರಶಸ್ತಿಗಳನ್ನು ಪದ್ಮವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ ಎಂಬ ಮೂರು ವಿಭಾಗಗಳಲ್ಲಿ ನೀಡಲಾಗುತ್ತದೆ. ಕಲೆ, ಸಾಮಾಜಿಕ ಕಾರ್ಯ, ಸಾರ್ವಜನಿಕ ವ್ಯವಹಾರಗಳು,

ವಿಜ್ಞಾನ ಮತ್ತು ಎಂಜಿನಿಯರಿಂಗ್, ವ್ಯಾಪಾರ ಮತ್ತು ಕೈಗಾರಿಕೆ, ಔಷಧ, ಸಾಹಿತ್ಯ ಮತ್ತು ಶಿಕ್ಷಣ, ಕ್ರೀಡೆ ಮತ್ತು ನಾಗರಿಕ ಸೇವೆ ಸೇರಿದಂತೆ ವಿವಿಧ ವಿಭಾಗಗಳು ಮತ್ತು ಕ್ಷೇತ್ರಗಳಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಈ ವರ್ಷ ಸರ್ಕಾರ ಏಳು ಪದ್ಮವಿಭೂಷಣ, ೧೯ ಪದ್ಮಭೂಷಣ ಮತ್ತು ೧೧೩ ಪದ್ಮಶ್ರೀ ಪ್ರಶಸ್ತಿಗಳನ್ನು ಒಳಗೊಂಡಂತೆ ೧೩೯ ಪದ್ಮ ಪ್ರಶಸ್ತಿಗಳನ್ನು ಘೋಷಿಸಿತ್ತು. ಮೊದಲ ಸಮಾರಂಭದಲ್ಲಿ, ರಾಷ್ಟ್ರಪತಿಗಳು ೨೦೨೫ ರ ವರ್ಷಕ್ಕೆ ೭೧ ಗಣ್ಯರಿಗೆ ಪದ್ಮ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಇಂದು ನಡೆಯಲಿರುವ ಎರಡನೇ ಸಮಾರಂಭದಲ್ಲಿ, ಒಟ್ಟು ೬೮ ಗಣ್ಯರಿಗೆ ರಾಷ್ಟ್ರಪತಿ ಪದ್ಮ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ.

************

ಗುಜರಾತ್‌ನ ಗಾಂಧಿನಗರದಲ್ಲಿರುವ ಮಹಾತ್ಮ ಮಂದಿರದಲ್ಲಿಂದು ಪ್ರಧಾನಿ ನರೇಂದ್ರ ಮೋದಿ, ೫ ಸಾವಿರದ ೫೩೬ ಕೋಟಿ ರೂಪಾಯಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈ ಯೋಜನೆಗಳು ನಗರಾಭಿವೃದ್ಧಿ, ಮೂಲಸೌಕರ್ಯ, ಜಲಸಂಪನ್ಮೂಲ ನಿರ್ವಹಣೆ, ಆರೋಗ್ಯ ರಕ್ಷಣೆ ಮತ್ತು ಕಂದಾಯ ಸೇವೆಗಳು ಸೇರಿದಂತೆ ಪ್ರಮುಖ ಕ್ಷೇತ್ರಗಳನ್ನು ಒಳಗೊಂಡಿವೆ. ಇದರ ಜೊತೆಗೆ ಜಾಮ್‌ನಗರ, ಸೂರತ್, ಅಹಮದಾಬಾದ್, ಗಾಂಧಿನಗರ ಮತ್ತು ಜುನಾಗಢ್ ನಗರಗಳಲ್ಲಿ ಹಲವು ನಗರಾಭಿವೃದ್ಧಿ ಯೋಜನೆಗಳಿಗೆ ಇಂದು ಚಾಲನೆ ದೊರೆಯಲಿದೆ. ಇವುಗಳಲ್ಲಿ ಅಹಮದಾಬಾದ್‌ನಲ್ಲಿ ೧ ಸಾವಿರ ಕೋಟಿ ರೂಪಾಯಿ ಮೌಲ್ಯದ ಸಾಬರಮತಿ ನದಿ ದಂಡೆ ಯೋಜನೆಯ ೩ನೇ ಹಂತದ ಶಿಲಾನ್ಯಾಸ ಪ್ರಮುಖವಾಗಿದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ೧ ಸಾವಿರದ ೬ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ೨೨ ಸಾವಿರಕ್ಕೂ ಅಧಿಕ ಮನೆಗಳನ್ನು ಪ್ರಧಾನಿ ಉದ್ಘಾಟಿಸಲಿದ್ದಾರೆ. ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಧಾನಿ ಗಾಂಧಿನಗರದಲ್ಲಿ ಯುಎನ್ ಮೆಹ್ತಾ ಹೃದ್ರೋಗ ಸಂಸ್ಥೆಯನ್ನು ಉದ್ಘಾಟಿಸಲಿದ್ದು, ಅಹಮದಾಬಾದ್‌ನಲ್ಲಿ ೫೮೮ ಕೋಟಿ ರೂಪಾಯಿ ವೆಚ್ಚದ ಐಪಿಡಿ ಸೌಲಭ್ಯಕ್ಕೆ ಶಂಕು ಸ್ಥಾಪನೆ ನೆರವೇರಿಸಲಿದ್ದಾರೆ. ಇದರ ಜೊತೆಗೆ ೧೭ ಪುರಸಭೆಗಳಿಗೆ ೨ ಸಾವಿರದ ೭೩೧ ಕೋಟಿ ಮತ್ತು ೧೪೯ ಪುರಸಭೆಗಳಿಗೆ ೫೬೯ ಕೋಟಿ ಅಭಿವೃದ್ಧಿ ಚೆಕ್‌ಗಳನ್ನು ವಿತರಿಸಲಿದ್ದಾರೆ. ಗುಜರಾತ್‌ನಲ್ಲಿ ೨೦೦೫ ರ ನಗರಾಭಿವೃದ್ಧಿ ವರ್ಷ ಪ್ರಾರಂಭವಾಗಿ ೨೦ ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ, ಪ್ರಧಾನಿ ಗಾಂಧಿನಗರದಲ್ಲಿ ಗುಜರಾತ್‌ನ ಶುದ್ಧ ಗಾಳಿ ಕಾರ್ಯಕ್ರಮದೊಂದಿಗೆ ೨೦೨೫ರ ನಗರಾಭಿವೃದ್ಧಿ ವರ್ಷಕ್ಕೆ ಚಾಲನೆ ನೀಡಲಿದ್ದಾರೆ.

************

ತಮಿಳುನಾಡಿನ ಆರು ಸ್ಥಾನಗಳು ಮತ್ತು ಅಸ್ಸಾಂನ ಎರಡು ಸ್ಥಾನಗಳು ಸೇರಿದಂತೆ ಒಟ್ಟು ಎಂಟು ರಾಜ್ಯಸಭಾ ಸ್ಥಾನಗಳಿಗೆ ದ್ವೈವಾರ್ಷಿಕ ಚುನಾವಣಾ ವೇಳಾಪಟ್ಟಿಯನ್ನು ಭಾರತೀಯ ಚುನಾವಣಾ ಆಯೋಗ ಪ್ರಕಟಿಸಿದೆ. ಮುಂದಿನ ತಿಂಗಳ ೨ ರಂದು ಅಧಿಸೂಚನೆ ಹೊರಡಿಸಲಾಗುವುದು ಮತ್ತು ಜೂನ್ ೧೯ ರಂದು ಮತದಾನ ನಡೆಯಲಿದೆ. ಮತ ಎಣಿಕೆ ಅದೇ ದಿನ ನಡೆಯಲಿದೆ ಎಂದು ಆಯೋಗ ತಿಳಿಸಿದೆ.ರಾಜ್ಯಸಭೆಯ ಎಂಟು ಸದಸ್ಯರ ಅವಧಿ ಈ ವರ್ಷದ ಜೂನ್ ಮತ್ತು ಜುಲೈ ನಡುವೆ ಮುಕ್ತಾಯಗೊಳ್ಳಲಿರುವ ಹಿನ್ನೆಲೆಯಲ್ಲಿ ಈ ಚುನಾವಣೆಯನ್ನು ನಡೆಸಲಾಗುತ್ತಿದೆ. ತಮಿಳುನಾಡಿನ ಆರು ರಾಜ್ಯಸಭಾ ಸಂಸದರಾದ ಡಾ. ಅನ್ಬುಮಣಿ ರಾಮದಾಸ್, ಎಂ. ಷಣ್ಮುಗಂ, ಎನ್. ಚಂದ್ರಶೇಖರನ್, ಎಂ. ಮೊಹಮ್ಮದ್ ಅಬ್ದುಲ್ಲಾ, ಪಿ. ವಿಲ್ಸನ್ ಮತ್ತು ವೈಕೊ ಈ ವರ್ಷ ಜುಲೈ ೨೪ ರಂದು ನಿವೃತ್ತರಾಗಲಿದ್ದು, ಅಸ್ಸಾಂನ ಮಿಷನ್ ರಂಜನ್ ದಾಸ್ ಮತ್ತು ಬೀರೇಂದ್ರ ಪ್ರಸಾದ್ ಬೈಶ್ಯ ಮುಂದಿನ ತಿಂಗಳು ೧೪ ರಂದು ನಿವೃತ್ತರಾಗಲಿದ್ದಾರೆ.

************

ದೇಶದ ರಕ್ಷಣಾ ಉದ್ಯಮ ಮೂಲವೊಂದನ್ನು ಬಲಪಡಿಸಲು ಮತ್ತು ರಕ್ಷಣಾ ಸಾರ್ವಜನಿಕ ವಲಯದ ಉದ್ದಿಮೆಗಳು - ಡಿಪಿಎಸ್‌ಯು ಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ನಿನ್ನೆ ನಡೆದ ಸಭೆಯಲ್ಲಿ ಎಂಟು ಡಿಪಿಎಸ್‌ಯುಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸಿ ಮಾತನಾಡಿದ ರಕ್ಷಣಾ ಸಚಿವರು, ಆಪರೇಶನ್ ಸಿಂದೂರ್‌ನ ಸಂದರ್ಭದಲ್ಲಿ ಭಾರತೀಯ ಸಶಸ್ತ್ರ ಪಡೆಗಳಿಗಾಗಿ ತಂತ್ರಜ್ಞಾನಗಳು ಮತ್ತು ಅಗತ್ಯ ವೇದಿಕೆಗಳ ಅಭಿವೃದ್ಧಿಯಲ್ಲಿ ಡಿಪಿಎಸ್‌ಯುಗಳು ಸೇರಿದಂತೆ ದೇಶದ ಸಂಪೂರ್ಣ ರಕ್ಷಣಾ ಉದ್ಯಮ ವಹಿಸಿದ ಮಹತ್ವದ ಪಾತ್ರದ ಕುರಿತು ಶ್ಲಾಘನೆ ವ್ಯಕ್ತಪಡಿಸಿದರು. ಇದೇ ವೇಳೆ, ಪ್ರಸ್ತುತ ಜಾಗತಿಕ ಪರಿಸ್ಥಿತಿ ಹಾಗೂ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು, ಡಿಪಿಎಸ್‌ಯುಗಳು ಆಧುನಿಕ ತಂತ್ರಜ್ಞಾನಗಳ ಮೇಲೆ ಆಧಾರಿತ ಉತ್ಪಾದನೆಯನ್ನು ಹೆಚ್ಚಿಸಬೇಕು ಮತ್ತು ಆಧುನಿಕ ಯುದ್ಧ ತಂತ್ರಜ್ಞಾನಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಬೇಕು ಎಂದು ಸಚಿವರು ನಿರ್ದೇಶನ ನೀಡಿದರು. ಸೇನೆಗೆ ಉತ್ಪನ್ನಗಳ ವಿತರಣೆಯ ಮಹತ್ವವನ್ನು ಪ್ರಸ್ತಾಪಿಸಿದ ಸಚಿವರು, ಈ ಬಗ್ಗೆ ಡಿಪಿಎಸ್‌ಯುಗಳಿಗೆ ಮಾರ್ಗದರ್ಶನ ನೀಡಿದರು. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ಗೆ ಮಹಾರತ್ನ ಹಾಗೂ

ಮಾಝುಗಾನ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್‌ಗೆ ನವರತ್ನ ಮಾನ್ಯತೆ ದೊರೆತಿರುವುದಕ್ಕೆ ಅವರು ಅಭಿನಂದನೆ ಸಲ್ಲಿಸಿದರು.

************

ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನಡೆದ ನಾಟ್ವಿಲ್ ವರ್ಲ್ಡ್ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾಂಡ್ ಪ್ರಿಕ್ಸ್‌ನಲ್ಲಿ ಪುರುಷರ ಈ೪೨ ಜಾವೆಲಿನ್ ವಿಭಾಗದಲ್ಲಿ ೬೧.೧೭ ಮೀಟರ್ ದೂರ ಎಸೆಯುವ ಮೂಲಕ ಭಾರತೀಯ ಪ್ಯಾರಾ ಅಥ್ಲೀಟ್ ಮಹೇಂದ್ರ ಗುರ್ಜರ್ ಹೊಸ ವಿಶ್ವ ದಾಖಲೆಯನ್ನು ಸ್ಥಾಪಿಸುವ ಮೂಲಕ ಇತಿಹಾಸ ಬರೆದಿದ್ದಾರೆ.೨೭ ವರ್ಷದ ಮಹೇಂದ್ರ ೨೦೨೨ ರಲ್ಲಿ ಬ್ರೆಜಿಲ್‌ನ ರಾಬರ್ಟೊ ಫ್ಲೋರಿಯಾನಿ ಎಡೆನಿಲ್ಸನ್ ಸ್ಥಾಪಿಸಿದ್ದ ೫೯.೧೯ ಮೀಟರ್ ದೂರ ಎಸೆತದ ಹಿಂದಿನ ದಾಖಲೆಯನ್ನು ಮುರಿದರು. ಗುರ್ಜರ್ ಅವರು ತಮ್ಮ ಮೂರನೇ ಎಸೆತದಲ್ಲಿ ಈ ದಾಖಲೆ ಮಾಡಿದರು,ಗುರ್ಜರ್ ಈ೪೦, ಈ೫೭, ಈ೬೩, ಮತ್ತು ಈ೬೪ ವಿಭಾಗಗಳ ಕ್ರೀಡಾಪಟುಗಳೊಂದಿಗೆ ಸಂಯೋಜಿತ ಸ್ಪರ್ಧೆಯಲ್ಲಿ ಸ್ಪರ್ಧಿಸಿದ್ದರೂ, ಅವರು ಈ೪೨ ರಲ್ಲಿ ಚಿನ್ನ ಗೆದ್ದರು ಮತ್ತು ಆ ವಿಭಾಗದಲ್ಲಿ ವಿಶ್ವ ದಾಖಲೆಯನ್ನು ಸ್ಥಾಪಿಸಿದರು.ಈ ತಿಂಗಳ ೨೩ ರಂದು ೫.೫೯ ಮೀ ಜಿಗಿತದೊಂದಿಗೆ ಲಾಂಗ್ ಜಂಪ್ ಖಿ೪೨ ಸ್ಪರ್ಧೆಯಲ್ಲಿ ಗೆದ್ದ ಗುರ್ಜರ್ ಅವರ ಎರಡನೇ ಚಿನ್ನ ಇದಾಗಿದೆ. ಇದು ಅವರ ಲಾಂಗ್ ಜಂಪ್‌ನಲ್ಲಿ ಚೊಚ್ಚಲ ಪ್ರವೇಶವಾಗಿದ್ದು, ಈಗ ಅವರು ಈ ವಿಭಾಗದಲ್ಲಿ ಏಷ್ಯಾದ ಅಗ್ರ ಶ್ರೇಯಾಂಕಿತ ಕ್ರೀಡಾಪಟುವಾಗಿದ್ದಾರೆ.ಡ್ಯೂಯಲ್ ಪ್ಯಾರಾಲಿಂಪಿಕ್ ಚಿನ್ನದ ಪದಕ ವಿಜೇತ ಸುಮಿತ್ ಆಂಟಿಲ್, ಈ೬೪ ಜಾವೆಲಿನ್ ಸ್ಪರ್ಧೆಯಲ್ಲಿ ೭೧.೩೫ ಮೀಟರ್ ದೂರ ಎಸೆದು ಚಿನ್ನ ಗೆದ್ದರು.

************

ಜೈಪುರದಲ್ಲಿ ಕಳೆದ ರಾತ್ರಿ ನಡೆದ ಐಪಿಎಲ್ ಟಿ೨೦ ಕ್ರಿಕೆಟ್‌ನ ನಿರ್ಣಾಯಕ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ೭ ವಿಕೆಟ್‌ಗಳಿಂದ ಸೋಲಿಸುವ ಮೂಲಕ ಪಂಜಾಬ್ ಕಿಂಗ್ಸ್ ತಂಡವು ಅಗ್ರ-೨ರ ಸ್ಥಾನ ಮತ್ತು ಕ್ವಾಲಿಫೈಯರ್ ೧ ರಲ್ಲಿ ಸ್ಥಾನವನ್ನು ಖಚಿತ ಪಡಿಸಿಕೊಂಡಿದೆ. ೧೮೫ ರನ್‌ಗಳ ಗುರಿಯನ್ನು ಬೆನ್ನಟ್ಟಿದ ಪಂಜಾಬ್ ಕಿಂಗ್ಸ್ ತಂಡ ೧೮.೩ ಓವರ್‌ಗಳಲ್ಲಿ ಮೂರು ವಿಕೆಟ್‌ಗಳ ನಷ್ಟಕ್ಕೆ ೧೮೭ ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು. ಜೋಶ್ ಇಂಗ್ಲಿಸ್ ೭೩ ರನ್ ಗಳಿಸಿ ಮೂಲಕ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಮೊದಲು ಬ್ಯಾಟಿಂಗ್

ಮಾಡಿದ ಮುಂಬೈ ಇಂಡಿಯನ್ಸ್ ನಿಗದಿತ ೨೦ ಓವರ್‌ಗಳಲ್ಲಿ ೭ ವಿಕೆಟ್‌ಗಳಿಗೆ ೧೮೪ ರನ್ ಗಳಿಸಿತ್ತು. ಈ ಗೆಲುವಿನೊಂದಿಗೆ, ಪಂಜಾಬ್ ಕಿಂಗ್ಸ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಇಂದು ಲಕ್ನೋದ ಏಕಾನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಲಕ್ನೋ ಸೂಪರ್ ಜೈಂಟ್ಸ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ. ಪಂದ್ಯ ಸಂಜೆ ೭.೩೦ಕ್ಕೆ ಆರಂಭವಾಗಲಿದೆ.

************

ಜರ್ಮನಿಯ ಸುಹ್ಲ್‌ನಲ್ಲಿ ನಿನ್ನೆ ನಡೆದ ಐಎಸ್‌ಎಸ್‌ಎಫ್ ಕಿರಿಯರ ವಿಶ್ವಕಪ್ ೨೦೨೫ರ ಮಹಿಳೆಯರ ೨೫ ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ಶೂಟರ್ ತೇಜಸ್ವಾನಿ ಚಿನ್ನದ ಪದಕ ಗೆದ್ದಿದ್ದಾರೆ. ಫೈನಲ್ ಸ್ಪರ್ದೆಯಲ್ಲಿ ತೇಜಸ್ವಾನಿ ೩೧ ಅಂಕಗಳನ್ನು ಗಳಿಸಿದರು. ವಿಶ್ವದ ಅತ್ಯಂತ ಪ್ರತಿಷ್ಠಿತ ಟೂರ್ನಿಗಳಲ್ಲಿ ಒಂದಾದ ಈ ಕಿರಿಯರ ಶೂಟಿಂಗ್ ಸ್ಪರ್ಧೆಯಲ್ಲಿ ಭಾರತ ಪ್ರಸ್ತುತ ಮೂರು ಚಿನ್ನ, ನಾಲ್ಕು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕ ಸೇರಿದಂತೆ ಒಟ್ಟು ೧೧ ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

************

ಅಕ್ಟೋಬರ್ ೮ ರಿಂದ ೧೧ ರವರೆಗೆ ನವದೆಹಲಿಯಲ್ಲಿ ಆಯೋಜಿಸಲಾಗುತ್ತಿರುವ ಇಂಡಿಯಾ ಮೊಬೈಲ್ ಕಾಂಗ್ರೆಸ್‌ನ ೯ನೇ ಆವೃತ್ತಿಗಾಗಿ 'ಪರಿವರ್ತನೆಗಾಗಿ ನಾವಿನ್ಯತೆ' ಎಂಬ ಘೋಷವಾಕ್ಯವನ್ನು ನಿನ್ನೆ ಕೇಂದ್ರ ದೂರಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಘೋಷಿಸಿದರು. ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಸಚಿವರು, ಈ ವರ್ಷದ ವಿಷಯ ಭವಿಷ್ಯ ರೂಪಿಸುವಲ್ಲಿ ನಾವೀನ್ಯತೆ ಮುಖ್ಯಪಾತ್ರ ವಹಿಸುತ್ತಿರುವುದನ್ನು ಮತ್ತು ಕೈಗಾರಿಕೆ, ಮೂಲಸೌಕರ್ಯ, ಸಮಾಜ ಹಾಗೂ ಸುಸ್ಥಿರತೆಯಂತಹ ವಿವಿಧ ಕ್ಷೇತ್ರಗಳಲ್ಲಿ ನೈಜ ಪರಿವರ್ತನೆ ತರಲು ದಾರಿ ಮಾಡಿಕೊಡುತ್ತಿರುವುದನ್ನು ಒತ್ತಿ ಹೇಳಿದ್ದಾರೆ ದೂರಸಂಪರ್ಕ ಕ್ಷೇತ್ರದ ಕ್ರಾಂತಿಗೆ ಇಂದು ಭಾರತ ಸಾಕ್ಷಿಯಾಗುತ್ತಿದೆ. ಭಾರತ ಇಂದು ವಿಶ್ವದ ಅತ್ಯಾಧುನಿಕ, ಗ್ರಾಹಕ-ಕೇಂದ್ರಿತ ಮತ್ತು ಸೇವಾ-ಆಧಾರಿತ ದೂರಸಂಪರ್ಕ ಜಾಲವೊಂದನ್ನು ನಿರ್ಮಿಸಿರುವುದಾಗಿ ಸಚಿವರು ಹೇಳಿದರು

************

ಇಂದಿನಿಂದ ಆರಂಭವಾಗುವ ಸಿಂಗಾಪುರ ಓಪನ್ ೨೦೨೫ ರ ಬ್ಯಾಡ್ಮಿಂಟನ್ ಸ್ಪರ್ದೆಯಲ್ಲಿ ಪಿವಿ ಸಿಂಧು, ಲಕ್ಷ್ಯ ಸೇನ್ ಮತ್ತು ಪುರುಷರ ಡಬಲ್ಸ್ ಜೋಡಿ ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಸೇರಿದಂತೆ ಭಾರತದ ಅಗ್ರ ಆಟಗಾರರ ತಂಡ ಭಾಗವಹಿಸಲಿದೆ. ಮಹಿಳಾ ಸಿಂಗಲ್ಸ್‌ನಲ್ಲಿ ಮಾಳವಿಕಾ ಬನ್ಸೋಡ್, ಅನ್ಮೋಲ್ ಖಾರ್ಬ್ ಮತ್ತು ಉನ್ನತಿ ಹೂಡಾ ಸ್ಪರ್ಧಿಸುತ್ತಿದ್ದಾರೆ. ಮಹಿಳಾ ವಿಭಾಗದಲ್ಲಿ, ಟ್ರೀಸಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಮಹಿಳಾ ಡಬಲ್ಸ್‌ನಲ್ಲಿ ಭಾಗವಹಿಸಲಿದ್ದರೆ, ತನಿಶಾ ಕ್ರಾಸ್ಟೊ ಮತ್ತು ಧ್ರುವ್ ಕಪಿಲಾ ಭಾರತದ ಮಿಶ್ರ ಡಬಲ್ಸ್ ಅಭಿಯಾನವನ್ನು ಮುನ್ನಡೆಸಲಿದ್ದಾರೆ.

************